ದಿನಾಂಕಃ 01-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಎಸ ಎಸ್ ಎನ್  ವಕೀಲರಿಂದಃ**

ದಾವಾ ಆಸ್ತಿಯ ಬಾಬ್ತು ಹೊರಡಿಡಲಾಗಿದೆ ಎನ್ನಲಾದ ಠರಾವು  ಸಂ. ಹೇಳಲು ಬರುವುದಿಲ್ಲ. ಸದರಿ ಠರಾವು  ಪಾಸ್ ಮಾಡಿದ ನಕಲಿನ ಪ್ರತಿ ನ್ಯಾಯೂಲಯಕ್ಕೆ ಸಲ್ಲಿಸಿರುವುದಿಲ್ಲ.  ದಾವಾ ಆಸ್ತಿ ಉತ್ತರ ದಿಕ್ಕಿನಲ್ಲಿ 3 ಕಾಂಪ್ಲೆಕ್ಸ ಗಳನ್ನು 1994-95 ರಲ್ಲಿ ಕಟ್ಟಿಸಿರುತ್ತೆನೆ. ಸದರಿ ಕಾಂಪ್ಲೆಕ್ಸ ಗಳನ್ನು ಕಟ್ಟಬೇಕಾದರೆ ಪಂಚಾಯತಿಗೆ ಅರ್ಜಿಯನ್ನು ಸಲ್ಲಸಿರುತ್ತೇನೆ. ಸದರಿ ಪಂಚಾಯತಿಗೆ ಸಲ್ಲಸಿದ  ಅರ್ಜಿಯ ನಕಲನ್ನು ನ್ಯಾಯಾಲಯಕ್ಕೆ ಸಲ್ಲಿಸಬಲ್ಲೆ. ನಾನು ಅರ್ಜಿ ಸಲ್ಲಿಸಿದ ಪಂಚಾಯತಿರವರು ನನಗೆ ಅನೂಮತಿಯನ್ನು

ನೀಡಿರುತ್ತಾರೆ.

ಸದರಿ ಪಂಚಾಯತಿರವರ ಅನುಮತಿ ಪತ್ರದಲ್ಲಿ ನಾನು ಆಸ್ತಿಯ ಉತ್ತರ ದಿಕ್ಕಿಗೆ ಕಟ್ಟಡ ಕಟ್ಟಬೇಕಾದರೆ ಎಷ್ಟು ಸೆಟ್ ಬ್ಯಾಕ್ ಬಿಡಬೇಕೆಂದು ಅದರಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿ. ನಿಮ್ಮ ಆಸ್ತಿಯ ಉತ್ತರ ದಿಕ್ಕಿಗೆ ಎಷ್ಟು ಪೂಟ್ ಸೆಟ್ ಬ್ಯಾಕ್ ಬಿಡಬೇಕೆಂದು ಎಂದು ಅನುಮತಿ ಪತ್ರದಲ್ಲಿ ನಮೂದಾಗಿತ್ತು ಸಾಕ್ಷಿಯು ಗಟಾರನಿಂದ 1 ಪೂಟ ಜಾಗ ಬಿಟ್ಟು ಕಟ್ಟಿಕೊಳ್ಳಬೇಕು ಎಂದು ಬರೆಯಲಾಗಿದೆ ಎಂದು ಹೇಳುತ್ತಾರೆ . ಸದರಿ ಗಟಾರನಿಂದ 1 ಪೂಟ ಜಾಗ ಬಿಟ್ಟು ಕಟ್ಟಿಕೊಳ್ಳಬೇಕು ಎಂದು ಬರೆಯಲಾಗಿದೆ ಎಂದು ಹೇಳಲಾದ ದಾಖಲೆ ನ್ಯಾಯಾಲಯಕ್ಕೆ ಸಲ್ಲಿಸಬಲ್ಲೆ. ನಾನು ಕಾಂಪ್ಲೆಕ್ಸ ಕಟ್ಟುವ ಪೂರ್ವದಲ್ಲಿ ರಸ್ತೆಯ ಅಗಲ 10-12 ಪೂಟ ಇತ್ತು ಎಂದರೆ ಸಾಕ್ಷಿಯು 16-17 ಪೂಟ್ಟ ಇತ್ತು ಎಂದು ಹೇಳುತ್ತಾರೆ . ನಾನು ಕಾಂಪ್ಲೆಕ್ಸ ಕಟ್ಟುವ ಪೂರ್ವದಲ್ಲಿ ರಸ್ತೆಯ ಅಗಲ 16-17 ಪೂಟ್ಟ ಇತ್ತು ಎಂದು ತೋರಿಸಲು ದಾಖಲೆ ಯನ್ನು ನ್ಯಾಯಾಲಯಕ್ಕೆ ಸಲ್ಲಿಸಬಲ್ಲೆ ಎಂದು ಹೇಳುತ್ತಾರೆ .

ಸದರಿ ರಸ್ತೆಯ ಅಗಲವು 16-17 ಪೂಟ್ಟ ಇತ್ತು ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಕಾಂಪ್ಲೆಕ್ಸ ಕಟ್ಟಲು ಅನುಮತಿ ಪಡೆದಾಗ ದಾಖಲೆಯಲ್ಲಿ ಪೂರ್ವ ಪಶ್ಚಿಮ ಹಾಗೂ ಉತ್ತರ ದಕ್ಷಿಣ ಎಷ್ಟು ಜಾಗದಲ್ಲಿ ಕಟ್ಟಬೇಕೆಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಪೂರ್ವ ಪಶ್ಚಿಮ 33 ಪೂಟ ಹಾಗೂ ಉತ್ತರ ದಕ್ಷಿಣ 66 ಪೂಟ ಅದರ ಪೈಕಿ 21 ಪುಟಾ ಜಾಗೆಯಲ್ಲಿ ಕಾಂಪ್ಲೆಕ್ಸ ಕಟ್ಟಿದ್ದೇನೆ ಎಂದು ಹೇಳುತ್ತಾರೆ. ಕಾಂಪ್ಲೆಕ್ಸ ನಿರ್ಮಾಣ ಪೂರ್ಣಗೊಂಡ ನಂತರ ಪಂಚಾಯತಿರವರಿಗೆ ಕಂಪ್ಲಿಶನ್ ಪ್ರಮಾಣ ಪತ್ರ ನೀಡಿ ಎಂದು ಕೇಳಿಲ್ಲ ಎಂದರೆ ಸರಿ. ಪಂಚಾಯತಿರವರು ಅನುಮತಿಯನ್ನು ನೀಡಿದ ಜಾಗದಲ್ಲಿ ಕಾಂಪ್ಲೆಕ್ಸ ಕಟ್ಟದೇ ಇದ್ದರಿಂದ ಕಂಪ್ಲಿಶನ್ ಪ್ರಮಾಣ ಪತ್ರ ಪಡೆದಿಲ್ಲ ಎಂದರೆ ಸರಿಯಲ್ಲ. ಕಾಂಪ್ಲೆಕ್ಸ ಉತ್ತರ ದಿಕ್ಕಿಗೆ ಸುಮಾರ 2-3 ವರ್ಷಗಳ ಹಿಂದೆ ಗಟಾರ ನಿರ್ಮಾಣ ಮಾಡಿದ್ದಾರೆ ಎಂದರೆ ಸಾಕ್ಷಿಯುಸುವಮಾರು 10 ವರ್ಷಗಳ ಹಿಂದೆ ಮಾಡಿದ್ದಾರೆ ಎನ್ನುತ್ತಾರೆ .

ಗಟಾರ ಮಾಡುವಾಗ ರಸ್ತೆಯನ್ನು 15-20 ಪೂಟ ಅಗಲ ಮಾಡಿದ್ದಾರೆ ಎಂದರೆ ಸರಿಯಲ್ಲ. ಕಾಂಪ್ಲೆಕ್ಸ ದಕ್ಷಿಣ ದಿಕ್ಕಿಗೆ ನಾನು ಮನೆ ಕಟ್ಟಕೊಳ್ಳುವಾಗ ಪಂಚಾಯತಿವರ ಅನುಮತಿ ಪಡೆದು ಮನೆ ಕಟ್ಟಿರುತ್ತೇನೆ. ನಾನು ಮನೆ ಕಟ್ಟಕೊಳ್ಳುವಾಗ ಪಂಚಾಯತಿವರಿಗೆ ಸಲ್ಲಸಿದ ಅನುಮತಿ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿದ್ದೇನೆ. ಸದರಿ ಪಂಚಾಯತಿವರ ಅನುಮತಿ ಪತ್ರದಲ್ಲಿ ಪೂರ್ವ ಪಶ್ಚಿಮ – ಉತ್ತರ ದಕ್ಷಿಣ ಎಷ್ಟು ಜಾಗೆಯಲ್ಲಿ ಕಟ್ಟಿಕೊಳ್ಳಬೆಕಂದು ನಮೂದಾಗಿರುತ್ತದೆ ಎಂದರೆ ಸರಿ. ನಾನು ಮನೆ ಕಟ್ಟಕೊಂಡ ನಂತರ ಪಂಚಾಯತಿರವರಿಗೆ ಮನೆ ನಿರ್ಮಾಣಗೊಂಡ ಬಗ್ಗೆ ಕಂಪ್ಲಿಶನ್ ಪ್ರಮಾಣ ಪತ್ರ ನೀಡಿ ಎಂದು ಕೇಳಿಲ್ಲ.

ನನ್ನ ಮನೆಯ ದಕ್ಷಿಣ ದಿಕ್ಕಿಗೆ ಪ್ರತಿವಾದಿಯವರ ಮನೆ ಇವೆ ಎಂದರೆ ಸಾಕ್ಷಿಯು ನಮ್ಮ ಮನೆಯಾದ ಮೆಲೆ 20 ಪೂಟ ಜಾಗವಿದ್ದು, ಅದಾದ ನಂತರ ಪ್ರತಿವಾದಿರವರ ಮನೆಗಳಿವೆ ಎನ್ನುತ್ತಾರೆ . ನಮ್ಮ ಮನೆಯ ಪಕ್ಕಕ್ಕೆ 20 ಪೂಟ ಜಾಗವಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ದಕ್ಷಿಣ ದಿಕ್ಕಿಗೆ 20 ಪೂಟ ಖುಲ್ಲಾ ಜಾಗವಿದೆ ಎಂದು ನಿಪಿ1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಿಪಿ1 ರಲ್ಲಿ ಆರ್ ಸಿಸಿ ವಾಣಿಜ್ಯ ಮಳಿಗೆ ಎಂದು ಬರೆದಿದ್ದು, ಮನೆ ಸಹಿತ ಬರೆದಿಲ್ಲ ಎಂದರೆ ಸರಿ. ನಿಪಿ2 ರಲ್ಲಿ 2 ಗುಂಟೆ ಜಾಗ ಕಡಿಮೆ ಮಾಡಿ ಆಸ್ತಿಯ ವಿಸ್ತೀರ್ಣ 66 X 33 ಎಂದು ತೋರಿಸಲಾಗದ ಬಗ್ಗೆ ದಾಖಲೆ ಹಾಜರಪಡಿಬಲ್ಲೆ ಎನ್ನುತ್ತಾರೆ.

ನಿಪಿ4 ರಲ್ಲಿ 2 ಗುಂಟೆ ಜಾಗ ನನಗೆ ಮಂಜೂರಾದ ಬಗ್ಗೆ ಎಲ್ಲಿಯೂ ನಮೂದು ಇಲ್ಲ ಎಂದರೆ ಸರಿ. ನಿಪಿ4 ರಲ್ಲಿ ಆಸ್ತಿಯ ವರ್ಣನೆ 66 X 33 ಎಂದು ಬರೆದಿಲ್ಲ ಎಂದರೆ ಸರಿ. ಪ್ರತಿವಾದಿರವರ ಆಸ್ತಿ ಸಂಖ್ಯೆಯಾದ 128 ರ ಪೂರ್ವದ ಸಂಖ್ಯೆ 378 ಎಂದು ಅವರ ಖರೀದಿ ಪತ್ರದಲ್ಲಿ ನಮೂದಾಗಿತ್ತು ಎಂದರೆ ಸರಿ. ನಿಪಿ10 ರಲ್ಲಿ ಬಂಗಾರವರು ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಆರ್ಜಿಯಲ್ಲಿ ಆಸ್ತಿ ಸಂ. 606ಎ,606ಬಿ ವಾಣಿಜ್ಯ ಮಳಿಗೆ ಹಾಗೂ ಕೆಂಪು ಹಂಚಿನ ಮನೆಯನ್ನು ನನ್ನ ಹೆಸರಿಗೆ ದಾಖಲು ಮಾಡಲು ಕೋರಿದ್ದರು ಎಂದರೆ ಸರಿ. ನನ್ನ ತಾಯಿ ಸಲ್ಲಿಸಿದ ಅರ್ಜಿಯ ಮೇರೆಗೆ ಉತಾರಿನಲ್ಲಿ ನನ್ನ

ಹೆಸರು ದಾಖಲಾಗಿದೆ ಎಂದರೆ ಸರಿ. ನಿಪಿ16 ರಲ್ಲಿ ಆಸ್ತಿ ಸಂಖ್ಯೆ 606/ಎ/1 ರಲ್ಲಿ ವಿಸ್ತೀರ್ಣ ನಮೂದಿಸಿಲ್ಲ ಎಂದರೆ ಸರಿ. ನಿಪಿ17 ರಲ್ಲಿ ಆಸ್ತಿ ಸಂಖ್ಯೆ 606/ಎ/2 ರಲ್ಲಿ ವಿಸ್ತೀರ್ಣ ನಮೂದಿಸಿಲ್ಲ ಎಂದರೆ ಸರಿ. ನಿಪಿ18 ರಲ್ಲಿ ಆಸ್ತಿ ಸಂಖ್ಯೆ 606/ಎ/3 ರಲ್ಲಿ ವಿಸ್ತೀರ್ಣ ನಮೂದಿಸಿಲ್ಲ ಎಂದರೆ ಸರಿ.

ನಿಪಿ19 ರಲ್ಲಿ ಆಸ್ತಿ ಸಂಖ್ಯೆ 606/ಬಿ ಗೆ ಸಂಬಂದಿಸಿದಂತೆ ಆಸ್ತಿಯ ವಿವರ ಕೆಂಪು ಹಂಚಿನ ಮನೆ ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ19 ರಲ್ಲಿ ಆಸ್ತಿ ಸಂಖ್ಯೆ 606/ಬಿ ಗೆ ಸಂಬಂದಿಸಿದಂತೆ ಆಸ್ತಿಯ ವಿಸ್ತೀರ್ಣ ನಮೂದಿಸಿಲ್ಲ ಎಂದರೆ ಸರಿ. ಪ್ರತಿವಾದಿಗಳು ತಮ್ಮ ಜಾಗೆಯಲ್ಲಿ ಮನೆಯನ್ನು ಕಟ್ಟಕೊಳ್ಳುತ್ತಿದ್ದರು ಅವರಿ ತೊಂದರೆ ಕೊಡುವ ಉದ್ದೇಶದಿಂದ ನಿಪಿ 6 ಹಾಗೂ 7 ರಂತೆ ಪಿಡಿಒ ಗ್ರಾಮ ಪಂಚಾಯತ ನಂದಗಾವ ಹಾಗೂ ತಾಲೂಕಾ ಪಂಚಾಯತ ಅಧಿಕಾರಿ ಗೋಕಾಕರವರಿಗೆ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ8 ಹಾಗೂ 9 ರ ಅನುಗುಣವಾಗಿ ಪ್ರತಿವಾದಿರವರು ಮನೆಯನ್ನು ತಮ್ಮ ಜಾಗೆಯಲ್ಲಿ ಕಟ್ಟಕೊಳ್ಳಬೇಕಾದರೆ ಪಂಚಾಯತಿರವರ ಅದಿಕಾರಿರವರ ಒತ್ತಡ ಹೇರಿ ನೋಟಿಸ ಜಾರಿ ಮಾಡಿಸಿರುತ್ತೆನೆ ಎಂದರೆ ಸರಿಯಲ್ಲ.

ನಿಪಿ15 ದಾಖಲೆಯು ಪಂಚಾಯತಿರವರ ಅದಿಕಾರಿರೊಂದಿಗೆ ಸೇರಿಕೊಂಡು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ವಾಣಿಜಉ ಮಳಿಗೆ ಹಾಗೂ ಮನೆಗೆ ಮಾತ್ರ ಕರ ತುಂಬಿದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಕ್ಷಣಿ ದಕ್ಕಿಗೆ ಮನೆಯನ್ನುಕಟ್ಟಕೊಂಡಿದ್ದು ಉತ್ತರ ದಕ್ಕಿಗೆ ಅವರಿಗೆ ಸೇರಿದ 36 ಫೂಟ ಜಾಗ ಉಳಿದಿದೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಖುಲ್ಲಾ ಜಗೆಯನ್ನುಕ ಬಳಿಸಸುವ ಉದ್ದೇಶದಿಂದ ಈ ದಾವೆ ಸಲ್ಲಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಯಿಸಲಾದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯನ್ನು ಬರೆಯಿಸಲು ಮಾಹಿತಿ ನಾನೆ ನೀಡಿದ್ದೇನೆ. ನನ್ನ ಮುಖ್ಯ ವಿಚಾರಣೆಯ 3 ನೇ ಪ್ಯಾರಾದಲ್ಲಿ 2 ಗುಂಟೆ ಜಮೀನು ನನ್ನ ತಾಯಿಗೆ ತಹಶಿಲ್ದಾರವರ ಕೊಟ್ಟಿದಾದ್ದಾರೆ ಎಂದು ಬರೆಯಿಸಲಾಗಿದೆ ಎಂದರೆ ಸಾಕ್ಷಿಯು ಅದು ತಪ್ಪಾಗಿದ್ದು 2 ಗುಂಟೆ ಜಾಗ ಎಂದು

ಬರೆಯಿಸಬೇಕಾಗಿತ್ತು ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಯಿಸಲಾಗದ ಸಂಗತಗಳನ್ನು ಓದಿ ತಿಳಿದ ನಂತರ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ತಾಯಿ ಹೆಸರಿಗೆ 2 ಗುಂಟೆ ಜಾಗ ಮಂಜಾರಾಗಿದ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಯಿಸಿಲ್ಲ ಎಂದರೆ ಸಾಕ್ಷಿಯು ಬರೆಯಿಸಿದ್ದೇನೆ ಎನ್ನುತ್ತಾರೆ. ಈ ರೀತಿಯಾಗಿ ನನ್ನ ತಾಯಿ ಹೆಸರಿಗೆ ಜಾಗ ಮಂಜೂರಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾಣಿಜ್ಯ ಮಳಿಗೆ ಹಾಗೂ ಮನೆಯ ನಂತರ ದಕ್ಷಿಣ ದಿಕ್ಕಿಗೆ ಉಳಿದ ಜಾಗೆಯ ಮಾಲಿಕ ನಾನಲ್ಲ ಎಂದರೆ ಸರಿಯಲ್ಲ.

ವಾದ ಪತ್ರದ 3 ನೇ ಪ್ಯಾರಾ 4 ನೇ ಸಾಲಿನಲ್ಲಿ ನನ್ನ ತಾಯಿಗೆ ಜಾಗ ಮಂಜೂರಾಗಿದೆ ಎಂದು ಎಲ್ಲೂ ಬರೆಯಿಸಿಲ್ಲ ಎಂದರೆ ಸಾಕ್ಷಿಯು ಅದು ಜಾಗ ಎಂದು ಬರೆಯಬೇಕಾದ ಜಾಗದಲ್ಲಿ ಲ್ಯಾಂಡ ಎಂದು ನಮೂದಾಗಿದೆ ಎನ್ನುತ್ತಾರೆ. ದಾವೆ ಸಲ್ಲಿಸುವ ಕಾಲಕ್ಕೆ ವಾದ ಪತ್ರವನ್ನು ಓದಿ, ತಿಳಿದ ನಂತರ ಸಹಿ ಮಾಡಿದ್ದೇನೆ ಎಂದರೆ ಸರಿ.

ನಿಪಿ5 ರಲ್ಲಿ ಪ್ರತಿವಾದಿರವರು ಆಸ್ತಯ ವಿವರ ವನ್ನು ತಪ್ಪಾಗಿ ನಮೂದಿಸಿ ದಾಖಲಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಸಲ್ಲಿಸಿ , ಸುಳ್ಳು ಸಾಕ್ಷ ನುಡಿಯುುತ್ತಿದ್ದೆನೆ ಎಂದರೆ ಸರಿಯಲ್ಲ. ನನ್ನ ಮನೆಯ ದಕ್ಷಿಣ ದಿಕ್ಕಿಗೆ ಇರುವ ಖುಲ್ಲಾ ಜಾಗಕ್ಕೆ ನನಗೆ ಸಂಬಂದ ಇಲ್ಲದಿದ್ದರೂ ಸದರಿ ಜಾಗ ನನ್ನದೆಂದು ಹೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ,
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.